2019 ಕ.ತೀ.ವ 1134

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ಶ್ರೀ ಜಿ.ಬಿ. ಲೋಕೇಶ್ –ವಿರುದ್ಧ– ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಇನ್ನೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಮತ್ತು 227ರಡಿಯಲ್ಲಿ ರಿಟ್ ಅರ್ಜಿ.

ರಿಟ್ ಅರ್ಜಿದಾರರು ಎದುರುದಾರರಲ್ಲಿ ವ್ಯವಸ್ಥಾಪಕರು(ನ್ಯಾಯಿಕ) ಆಗಿ ಸೇವೆ ಸಲ್ಲಿಸುತ್ತಿದ್ದು, ಅವರ ವಿರುದ್ಧ ಶಿಸ್ತು ಪರಿಪಾಲನಾ ನಡವಳಿಗಳನ್ನು ನಡೆಸಿ ಅರ್ಜಿದಾರರನ್ನು ವ್ಯವಸ್ಥಾಪಕರ ಹುದ್ದೆಯಲ್ಲಿ ಅತ್ಯಂತ ಕನಿಷ್ಠ ವೇತನಶ್ರೇಣಿಗೆ ಇಳಿಸಿದ ಎದುರುದಾರರ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಶಿಸ್ತು ಪರಿಪಾಲನಾ ಪ್ರಾಧಿಕಾರವು ಅರ್ಜಿದಾರರ ವಿವರಣೆಯನ್ನು ಅರ್ಥಪೂರ್ಣವಾಗಿ ಗ್ರಹಿಸಿರುವುದಿಲ್ಲ. ಶಿಸ್ತು ಪರಿಪಾಲನಾ ಪ್ರಾಧಿಕಾರವು ಸಾಕ್ಷ್ಯಾಧಾರಗಳನ್ನು ಗುಣಾವಲೋಕನೆ ಮಾಡಿಲ್ಲ ಮತ್ತು ನಿರ್ಣಯವನ್ನು ಮಾಡುವಾಗ ಯಾವುದೇ ಕಾರಣವನ್ನು ದಾಖಲಿಸಿಲ್ಲವೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಹಾಗೆಯೇ ಅರ್ಜಿದಾರರ ಪುನರವಲೋಕನಾ ಅರ್ಜಿಯನ್ನು ತಿರಸ್ಕರಿಸುವಾಗ ಅರ್ಜಿಯಲ್ಲಿನ ಯಾವುದೇ ವಸ್ತುಸ್ಥಿತಿ ಮತ್ತು ಕಾರಣಗಳನ್ನು ಪರಿಗಣಿಸಿರುವುದಿಲ್ಲವೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಶಿಸ್ತು ಪಾಲನಾ ಪ್ರಾಧಿಕಾರವು ವಿಚಾರಣಾ ಪ್ರಾಧಿಕಾರದ ನಿರ್ಣಯಗಳಿಗೆ ಅಸಮ್ಮತಿ ತೋರಲು ಯಾವ ಕಾರಣಗಳನ್ನು ಅರ್ಜಿದಾರರಿಗೆ ತಿಳಿಸದೆ ಸ್ವಾಭಾವಿಕ ನ್ಯಾಯತತ್ವಗಳ ಉಲ್ಲಂಘನೆಯಾಗಿದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿದೆ.

*ರಿಟ್ ಅರ್ಜಿ ಸಂಖ್ಯೆ: 11355/2012 (ಎಸ್–ಡಿಇ), ದಿನಾಂಕ 21ನೇ ಮಾರ್ಚ್, 2017.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (1998) 7 ಎಸ್‌ಸಿಸಿ 84*
*ಪಂಜಾಬ್ ನ್ಯಾಷನಲ್ ಬ್ಯಾಂಕ್ –ವಿರುದ್ಧ–*
*ಕುಂಜ್ ಬಿಹಾರಿ ಮಿಶ್ರಾ (ಉಲ್ಲೇ) 12*
*2. (1999) 7 ಎಸ್‌ಸಿಸಿ 739*
*ಯೋಗಿನಾಥ್ ಡಿ. ಬ್ಯಾಗ್ಡೇ –ವಿರುದ್ಧ–*
*ಮಹಾರಾಷ್ಟ್ರ ರಾಜ್ಯ (ಉಲ್ಲೇ) 13*
*3. (2006) 4 ಎಸ್‌ಸಿಸಿ 153*
*ರಂಜಿತ್ ಸಿಂಗ್ –ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 14*
*4. (2007) 1 ಎಸ್‌ಸಿಸಿ 437*
*ಮಥುರಾ ಪ್ರಸಾದ್ –ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 15*

ಅರ್ಜಿದಾರರ ಪರ: ಶ್ರೀ ಅಜಯ್ ಕುಮಾರ್ ಪಾಟೀಲ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಗುರುರಾಜ್ ಜೋಷಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

ಅರ್ಜಿದಾರನು, 1992ನೇ ವರ್ಷದಲ್ಲಿ ಎದುರುದಾರ – ನಿಗಮದಲ್ಲಿ ಉಪ ವ್ಯವಸ್ಥಾಪಕರಾಗಿ (ಕಾನೂನು) ನೇಮಕಗೊಂಡಿದ್ದರು ಹಾಗೂ 2003ನೇ ವರ್ಷದಲ್ಲಿ ವ್ಯವಸ್ಥಾಪಕರಾಗಿ (ಕಾನೂನು) ಬಡ್ತಿ ಪಡೆದಿದ್ದರು. ಮೆಸರ್ಸ್ ಬಿ.ಎಲ್. ಇಂಡಸ್ಟ್ರೀಸ್ (ಇಂಡಿಯಾ) ಲಿಮಿಟೆಡ್‌ಗೆ ನೀಡಿದ ಹಣಕಾಸು ನೆರವಿನ ವಿಷಯದಲ್ಲಿ ದಿನಾಂಕ: 18.9.2000ದಂದು ಕಾರಣ ಕೇಳುವ ನೋಟೀಸನ್ನು ನೀಡಲಾಗಿತ್ತು.

ಅರ್ಜಿದಾರನು ದಿನಾಂಕ: 20.08.2000ದಂದು ಉತ್ತರವನ್ನು ನೀಡಿದ್ದರು. 3 ಆರೋಪಗಳನ್ನು ಒಳಗೊಂಡಿರುವ ಅರ್ಜಿದಾರರ ಮೇಲೆ ದಿನಾಂಕ: 02.02.2010ರಂದು ಆರೋಪಪಟ್ಟಿಯನ್ನು ಹೊರಡಿಸಲಾಗಿತ್ತು. ಅವುಗಳೆಂದರೆ:

(i) ಸಿಸಿ ಸಂಖ್ಯೆ: ಇ1/ಯುಎಲ್‌ಸಿ/3768/1976, ದಿನಾಂಕ: 20.11.1993ನ್ನು ಹೊಂದಿರುವ ನಗರ ಭೂ ಗರಿಷ್ಠ ಪರಿಮಿತ ತೀರುವಳಿ ಪ್ರಮಾಣಪತ್ರವನ್ನು ಜಾಮೀನುದಾರನು ಸಲ್ಲಿಸಿದ್ದು ನೀವು ಅದನ್ನು ಅಂಗೀಕರಿಸಿದ್ದು, ಸರ್ವೆ ನಂ.77 ಮತ್ತು 78ನ್ನು ಹೊಂದಿರುವ (ಪಾರ್ಶ್ವಿಕ ಭದ್ರತೆಯೆಂದು ಅಂಗೀಕರಿಸಲಾಗಿದೆ) ಸ್ವತ್ತು ಐದು ಜನರ ಹೆಸರಿನಲ್ಲಿದೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ. ಆದಾಗ್ಯೂ ಕಾನೂನು ದಸ್ತಾವೇಜುಗಳನ್ನು ಶ್ರೀ ಸಿ.ಆರ್. ಮೋಹನ್‌ರಾವ್ ಎಂಬೊಬ್ಬರು ಕೆಎಸ್‌ಎಫ್‌ಸಿಯ ಹೆಸರಿನಲ್ಲಿ ನಿರ್ವಹಿಸಿದ್ದಾರೆ. ಒಬ್ಬ ಕಾನೂನು ಅಧಿಕಾರಿಯಾಗಿ ಕಾನೂನು ತೀರುವಳಿ ಪ್ರಮಾಣಪತ್ರವನ್ನು ನೀಡುವ ಮೊದಲು ನೀವು ಈ ದೃಷ್ಟಿಕೋನದಲ್ಲಿ ನೋಡುವಲ್ಲಿ ನೀವು ವಿಫಲರಾಗಿರುವಿರಿ.

(ii) ನಿರ್ವಹಿಸಲಾದ ಕಾನೂನು ದಸ್ತಾವೇಜುಗಳನ್ನು ಪಡೆದುಕೊಳ್ಳಲು ನೀವು 1998ರ ಮಾರ್ಚ್ 4, 5, 6 ರಂದು ಹೈದರಾಬಾದ್‌ಗೆ ಭೇಟಿ ನೀಡಿದ್ದು, ನೀವು ಭೇಟಿ ನೀಡಿದ್ದಾಗ, ಸದರಿ ಸ್ವತ್ತನ್ನು ತನಿಖೆ ಮಾಡುವಲ್ಲಿ ಹಾಗೂ ಮಾರ್ಗ ತಪ್ಪಿರುವುದನ್ನು ತಿಳಿಸುವಲ್ಲಿ ವಿಫಲರಾಗಿರುವಿರಿ. ನೀವು ದಸ್ತಾವೇಜುಗಳನ್ನು ನಿರ್ವಹಿಸುವ ಸಮಯದಲ್ಲಿ ಜಾಮೀನುದಾರ ಶ್ರೀ ಸಿ.ಆರ್. ಮೋಹನ್‌ರಾವ್ ಹಾಗೂ ಇತರರ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲೂ ಸಹ ನೀವು ವಿಫಲರಾಗಿದ್ದು, ಇವು, ಯುಕ್ತ ಬಾಕಿ ವಸೂಲಿ ಕ್ರಮವನ್ನು

ಪ್ರಾರಂಭಿಸಲು/ಜಾರಿಗೊಳಿಸಲು ಇದಕ್ಕೆ ಮುಕ್ತವಾಗುವ ಇತರ ಅವಲಂಬನೆಗಳನ್ನು ಅನುಸರಿಸಲು ನಿಗಮಕ್ಕೆ ಸಹಾಯಕ ವಾಗುತ್ತಿದ್ದವು.

(iii) ಆನುಷಂಗಿಕ ಭದ್ರತೆಗೆ ಸಂಬಂಧಿಸಿದ ಪಕ್ಷಕಾರನು ಸಲ್ಲಿಸಿದ ದಸ್ತಾವೇಜುಗಳ ಪ್ರಕಾರ, ರಸ್ತೆಯು ಪೂರ್ವಕ್ಕಿದೆ. ಅಷ್ಟೇ ಅಲ್ಲದೆ, ಉರ್ದುವಿನಲ್ಲಿರುವ ಪಕ್ಷಕಾರನು ಸಲ್ಲಿಸಿದ ಉರ್ದುವಿನಲ್ಲಿರುವ ಮೂಲ ಕ್ರಯಪತ್ರದ ಪ್ರಕಾರ, ರಸ್ತೆಯು ದಕ್ಷಿಣದ ಕಡೆಗೆ ಅಭಿಮುಖವಾಗಿದೆ. ಈ ಸಂಗತಿಯನ್ನು ಕಾನೂನು ತೀರುವಳಿಯನ್ನು ಪರಿಶೀಲಿಸುವ/ನೀಡುವ ಸಮಯದಲ್ಲಿ ನೀವು ಪರೀಕ್ಷಿಸಿಲ್ಲ. ಹೀಗಾಗಿ, ಸದರಿ ದಸ್ತಾವೇಜಿನ ನೈಜತೆಯನ್ನು ಗುರುತಿಸುವಲ್ಲಿ ಯುಕ್ತ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸುವಲ್ಲಿ ವಿಫಲರಾಗಿರುವಿರಿ.

ಅರ್ಜಿದಾರನು ದಿನಾಂಕ: 15.02.2010ರಂದು ಪ್ರತ್ಯುತ್ತರವನ್ನು ನೀಡಿ, ಎಲ್ಲಾ ಆಪಾದನೆಗಳನ್ನು ತಿರಸ್ಕರಿಸಿದ್ದಾನೆ. ಶಿಸ್ತು ಪ್ರಾಧಿಕಾರವು ಈ ಪ್ರತ್ಯುತ್ತರದಿಂದ ಸಮಾಧಾನಕರವಾಗಿಲ್ಲದಿರುವುದರಿಂದ ಶಿಸ್ತು ವಿಚಾರಣೆಯನ್ನು ನಡೆಸಲು ನಿವೃತ್ತ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರನ್ನು ನೇಮಕ ಮಾಡಲಾಗಿತ್ತು. ವಿಚಾರಣೆಯನ್ನು ನಡೆಸಿ ನಿರ್ಣಯಕ್ಕೆ ಬಂದ ನಂತರ ವಿಚಾರಣಾ ಅಧಿಕಾರಿಯು, ದಿನಾಂಕ: 09.08.2010ರಂದು ವರದಿಯನ್ನು ಸಲ್ಲಿಸಿದ್ದು, ಅರ್ಜಿದಾರನನ್ನು ಎಲ್ಲಾ ಆರೋಪಗಳಿಂದ ದೋಷಮುಕ್ತಗೊಳಿಸಿರುವರು. ನಿರ್ಣಯಗಳನ್ನು ಬೆಂಬಲಿಸಿ, ಯುಕ್ತ ಕಾರಣಗಳನ್ನು ನೀಡಿದ್ದರು. ನಿಗಮದ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ: 27.01.2011ರಂದು ಕಾರಣ ಕೇಳುವ ನೋಟೀಸನ್ನು ನೀಡಿದ್ದಾರೆ ಹಾಗೂ ನಿರ್ದೇಶಕರ ಮಂಡಳಿಯು, ವಿಷಯದ ಮೇಲೆ ದೀರ್ಘವಾದ ಚರ್ಚೆಗಳನ್ನು ನಡೆಸಿದ ನಂತರ ವಿಚಾರಣಾ ಅಧಿಕಾರಿಯ ನಿರ್ಣಯಗಳಿಗೆ ಅಸಮ್ಮತಿ ಸೂಚಿಸಿದ್ದಾರೆ. ದಿನಾಂಕ: 23.11.2010ರ ಮಂಡಳಿಯ ವ್ಯವಹರಣೆಯ ಪ್ರತಿಯನ್ನು ಹಾಗೂ ವಿಚಾರಣಾ ಅಧಿಕಾರಿಗಳ

ವರದಿಯನ್ನು ಒದಗಿಸಲಾಗಿತ್ತು. ಸದರಿ ಕಾರಣ ಕೇಳುವ ನೋಟೀಸಿಗೆ ಅರ್ಜಿದಾರನು ದಿನಾಂಕ: 5.4.2011ರಂದು ವಿವರಣೆಯನ್ನು ಸಲ್ಲಿಸಿದ್ದನು. ಎದುರುದಾರರ ವ್ಯವಸ್ಥಾಪಕ ಮಂಡಳಿಯು, ಅರ್ಜಿದಾರನು ಅಪಾರವಾದ ದೋಷವೆಸಗಿರುವನೆಂದು, ಹೀಗಾಗಿ ನಿಗಮದ ಹಿತಾಸಕ್ತಿಗೆ ಕುಂದು ತಂದಿರುವನೆಂಬ ನಿರ್ಣಯಕ್ಕೆ ಬಂದಿದ್ದು, ವ್ಯವಸ್ಥಾಪಕರ ದರ್ಜೆಯಲ್ಲಿನ ಕಾಲಿಕ ವೇತನ ಶ್ರೇಣಿಯಲ್ಲಿ ಕಡಿಮೆ ಮಟ್ಟದಲ್ಲಿ ಅರ್ಜಿದಾರನ ವೇತನವನ್ನು ಕಡಿತಗೊಳಿಸುವ ದಂಡ ವಿಧಿಸುವ ನಿರ್ಣಯಕ್ಕೆ ಬಂದಿದ್ದು, ಈ ಸಂಬಂಧದಲ್ಲಿ ದಿನಾಂಕ: 7.12.2011ರಂದು ಮಾಹಿತಿಯನ್ನು ನೀಡಿತ್ತು. ದಿನಾಂಕ: 25.01.2012ರಂದು, ಕರ್ನಾಟಕ ರಾಜ್ಯ ಹಣಕಾಸು ನಿಗಮ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 2003ರ (ಸಂಕ್ಷಿಪ್ತತೆಗಾಗಿ 'ನಿಯಮಗಳು') 26ನೇ ನಿಯಮದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮೂಲಕ ಸದರಿ ಆದೇಶದ ಪುನರ್ ಪರಿಶೀಲನೆಯನ್ನು ಕೋರಲಾಗಿತ್ತು. ನಿರ್ದೇಶಕರುಗಳ ಮಂಡಳಿಯು ಪುನರ್ ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಿ, ಆ ಸಂಬಂಧದಲ್ಲಿ ದಿನಾಂಕ: 9.3.2012ರಂದು ಅರ್ಜಿದಾರನಿಗೆ ಮಾಹಿತಿಯನ್ನು ನೀಡಿದ್ದು, ದಂಡವನ್ನು ವಿಧಿಸಿ ದಿನಾಂಕ: 7.12.2011ರ ಆದೇಶವನ್ನು ತಳ್ಳಿ ಹಾಕಲು ಈ ಅರ್ಜಿಯನ್ನು ಸಲ್ಲಿಸಲಾಗಿದ್ದು, ದಿನಾಂಕ: 9.3.2012ರ ಆದೇಶದ ಮೂಲಕ ಪುನರ್ ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಲಾಗಿತ್ತು.

2. ಮಾನ್ಯ ವಕೀಲರಾದ ಶ್ರೀ ಅಜಯ್‌ಕುಮಾರ್ ಪಾಟೀಲ್‌ರವರು, ಎದುರುದಾರನು 11–ಎ ನಿಯಮದ (3)ನೇ ಉಪ–ನಿಯಮವನ್ನು ಉಲ್ಲಂಘನೆ ಮಾಡಿದ್ದಾರೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ. ವಿಚಾರಣೆಯನ್ನು ನಡೆಸಿ ಪೂರ್ಣಗೊಳಿಸಿರುವ ವಿಚಾರಣಾ ಅಧಿಕಾರಿಯು, ಅರ್ಜಿದಾರನನ್ನು ಎಲ್ಲಾ ದೋಷಗಳಿಂದ ಮುಕ್ತಗೊಳಿಸಿದ್ದು ವಿಚಾರಣೆಯಲ್ಲಿ ದಾಖಲೆಯಲ್ಲಿಡಲಾದ ಸಂಪೂರ್ಣ ಸಾಕ್ಷ್ಯಾಧಾರಗಳನ್ನು ಮೌಲ್ಯಮಾಪನ ಮಾಡಿದ ನಂತರ ತೃಪ್ತಿಕರ ರೀತಿಯಲ್ಲಿ ಪರಿಗಣಿಸಲಾದ ವರದಿಯಾಗಿದೆಯೆಂದು ವರದಿಯನ್ನು ಸಲ್ಲಿಸಿರುವರೆಂದು, ಅರ್ಜಿದಾರನು ತನ್ನ ಮನವಿ ಸಲ್ಲಿಸಲು ಆ ಬಗ್ಗೆ ಅಸಮ್ಮತಿ ಸೂಚಿಸಲು ಹಾಗೂ ನೀಡಲು ಯಾವುದೇ ಕಾರಣಗಳಿಲ್ಲವೆಂದು ನಿವೇದಿಸಿದ್ದಾರೆ. ಅಷ್ಟೇ ಅಲ್ಲದೆ, ಅವರು,

ದಿನಾಂಕ: 27.01.2011ರ ಕಾರಣ ಕೇಳುವ ನೋಟೀಸಿಗೆ ಲಗತ್ತಿಸಲಾದ ಅನುಬಂಧ–1ರ ಪ್ರಕಾರ ನಮೂನೆಯು ನಿಯಮಗಳ 11–ಎ ನಿಯಮದ (3)ನೇ ಉಪ–ನಿಯಮದ ಕಡ್ಡಾಯ ಅಗತ್ಯತೆಯನ್ನು ಪೂರೈಸಿಲ್ಲವೆಂದು ನಿವೇದಿಸಿದ್ದಾರೆ. ಅರ್ಜಿದಾರನು, ದಿನಾಂಕ: 5.4.2011ರಂದು ವಿವರಣೆಯನ್ನು ಸಲ್ಲಿಸಿದ್ದು, ವಿವೇಚನೆಯನ್ನು ಬಳಸಿರುವುದಿಲ್ಲ. ಯಾಂತ್ರಿಕವಾಗಿ, ದಂಡವನ್ನು ವಿಧಿಸಲಾಗಿತ್ತು ಎಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದ್ದು, ವಾಸ್ತವವಾಗಿ ಕಾನೂನಿನಲ್ಲಿ ಉದ್ದೇಶಿಸಲಾದ ರೀತಿಯಲ್ಲಿ ವಿಚಾರಣೆ ನಡೆಸದೆ, ದಿನಾಂಕ: 9.3.2012ರ ಸಕಾರಣವಲ್ಲದ ಆದೇಶದ ಮೂಲಕ ವಜಾಗೊಳಿಸಲಾಗಿತ್ತು ಎಂದು ನಿವೇದಿಸಿದ್ದಾರೆ. ಎದುರುದಾರನು, ಪ್ರಕರಣವನ್ನು ಸರಿಯಾದ ರೀತಿಯಲ್ಲಿ ಗ್ರಹಿಸಿ, ಪರಿಗಣಿಸುವಲ್ಲಿ ವಿಫಲವಾಗಿದ್ದು, ಪ್ರಶ್ನಿತ ಆದೇಶಗಳು, ಅನೇಕ ಕೊರತೆಗಳಿಂದ ಕೂಡಿದ್ದು, ಯಾವುದೇ ಸಾಕ್ಷ್ಯವನ್ನು ಬೆಂಬಲಿಸದೆ ನೀಡಲಾದ ನಿರ್ಣಯಗಳು ವಿಕೃತವಾಗಿದ್ದು, ಒಟ್ಟು ನ್ಯಾಯದ ವೈಫಲ್ಯವಾಗಿದೆಯೆಂದು ಅವರು ವಾದಿಸಿದ್ದಾರೆ. ಅವರು, ಸರಿಯಾದ ಮತ್ತು ಯುಕ್ತವಾದ ವಿವೇಚನೆಯನ್ನು ಬಳಸಿಲ್ಲವೆಂದು ಹಾಗೂ ಎರಡೂ ಆದೇಶಗಳು ಕಾನೂನಿನಲ್ಲಿ ಕೆಟ್ಟದಾಗಿದ್ದು, ಪ್ರತಿಕ್ರಿಯೆಯನ್ನು ಸಲ್ಲಿಸಿರುವುದರಿಂದ ಹಾಗೂ ಪುನರ್‌ಪರಿಶೀಲನಾ ಅರ್ಜಿಯನ್ನೂ ಸಹ ಸಲ್ಲಿಸಿರುವುದರಿಂದ ಕಾನೂನಿಗನುಸಾರವಾಗಿ ಪರಿಗಣನೆಯನ್ನು ಮಾಡಿಲ್ಲವೆಂದು ನಿವೇದಿಸಿದ್ದಾರೆ.

3. ಇದಕ್ಕೆ ವಿರುದ್ಧವಾಗಿ ಮಾನ್ಯ ವಕೀಲರಾದ ಶ್ರೀ ಗುರುರಾಜ್ ಜೋಶಿಯವರು ಅರ್ಜಿದಾರನಿಗೆ ದಾಖಲಿಸಲಾದ ಕಾರಣಗಳನ್ನು ನೀಡುವ ಅಗತ್ಯವಿಲ್ಲವೆಂದು ವಾದಿಸುವ ಮೂಲಕ ಹಾಗೂ ದಿನಾಂಕ: 7.12.2011 ಹಾಗೂ ದಿನಾಂಕ: 9.3.2012ರ ಆದೇಶ ಸಮರ್ಥನೀಯವಾಗಿವೆಯೆಂದು ಇವು ಮಧ್ಯೆಪ್ರವೇಶಿಸುವುದನ್ನು ಕೋರುವುದಿಲ್ಲವೆಂದು ಪ್ರಶ್ನಿತ ಆದೇಶಗಳನ್ನು ಪ್ರತಿಪಾದಿಸಿದ್ದಾರೆ. ಪರ್ಯಾಯವಾಗಿ, ಅವರು, ಅರ್ಜಿದಾರನ ವಿರುದ್ಧ ಹೊರಡಿಸಿದ ಆದೇಶದ(ಗಳ)ಲ್ಲಿ ಯಾವುದೇ ಶಿಥಿಲತೆ ಇದ್ದರೂ ಕೂಡ, ಅಗತ್ಯವಾಗಿ ಹೊಸದನ್ನು ರೂಪಿಸುವ ಸ್ವಾತಂತ್ರ್ಯವನ್ನು ಎದುರುದಾರನಿಗೆ ಕಾಯ್ದಿರಿಸಲಾಗಿದೆ.

4. ದಾಖಲೆಯನ್ನು ಅವಗಾಹಿಸಲಾಗಿದ್ದು ಪ್ರತಿವಾದಗಳನ್ನು ಪರಿಗಣಿಸಲಾಗಿದೆ. ಪರಿಗಣನೆಯ ಅಂಶ ಯಾವುದೆಂದರೆ, ಎದುರುದಾರನು ಶಿಕ್ಷೆಯನ್ನು ವಿಧಿಸುವ ವಿಷಯದಲ್ಲಿ ದೋಷವೆಸಗಿದ್ದಾನೆಯೇ ಎಂಬುದಾಗಿದೆ.

5. ನಿಯಮ 11–ಎ, ವಿಚಾರಣಾ ವರದಿಯ ವಿಷಯದಲ್ಲಿ ಕ್ರಮವನ್ನು ಕೈಗೊಳ್ಳುವುದಕ್ಕೆ ಸಂಬಂಧಪಟ್ಟಿರುವುದಾಗಿದೆ. ವಿಚಾರಣೆಯ ವರದಿಯನ್ನು ಸ್ವೀಕರಿಸಿದ ನಂತರ ಶಿಸ್ತುಪ್ರಾಧಿಕಾರವು ಹೊರಡಿಸಬೇಕಾದ ಆದೇಶಗಳ ನಾಲ್ಕು ವಿಧದ ಆದೇಶಗಳನ್ನು ಇದು ಉಪಬಂಧಿಸುತ್ತದೆ. ಎಂದರೆ, ಕಾರಣಗಳನ್ನು ದಾಖಲಿಸುವ ಮೂಲಕ:

(i) ವಿಚಾರಣಾ ಪ್ರಾಧಿಕಾರಕ್ಕೆ ಪ್ರಕರಣವನ್ನು ಕಳುಹಿಸುವುದು;

(ii) ಅಸಮ್ಮತಿಗೆ ಕಾರಣಗಳನ್ನು ದಾಖಲಿಸುವುದು ಹಾಗೂ ದಾಖಲೆಯಲ್ಲಿರುವ ಸಾಕ್ಷ್ಯವು ಉದ್ದೇಶಗಳಿಗೆ ಸಾಕಷ್ಟಿದ್ದರೆ ಆರೋಪಗಳ ಸಂಬಂಧದಲ್ಲಿ ಅದರ ಸ್ವಂತ ನಿರ್ಣಯಗಳನ್ನು ದಾಖಲಿಸುವುದು ಹಾಗೂ ಅಂಥ ಅಸಮ್ಮತತೆಗೆ ಸಂಬಂಧಿಸಿದ ಕಾರಣಗಳನ್ನು ತಿಳಿಸುವುದು;

(iii) 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಒಂದು ಅಥವಾ ಅದಕ್ಕಿಂತ ಹೆಚ್ಚಿನ ದಂಡಗಳನ್ನು ವಿಧಿಸುವುದು;

(iv) ನೌಕರನನ್ನು ಆರೋಪಮುಕ್ತನನ್ನಾಗಿ ಮಾಡುವುದು.

6. 11–ಎ(3) ನಿಯಮವು, ಇದನ್ನು ಸ್ಪಷ್ಟಪಡಿಸುತ್ತದೆ, ಶಿಸ್ತು ಪ್ರಾಧಿಕಾರಕ್ಕೆ ಆರೋಪದ ವಿಷಯದ ಸಂಬಂಧ ವಿಚಾರಣಾ ಪ್ರಾಧಿಕಾರದ ನಿರ್ಣಯಗಳ ಬಗ್ಗೆ ಅಸಮ್ಮತಿಯಿದ್ದಲ್ಲಿ, ಉದ್ದೇಶಗಳಿಗಾಗಿ ದಾಖಲೆಯಲ್ಲಿರುವ ಸಾಕ್ಷ್ಯವು ಸಾಕಷ್ಟಿದ್ದರೆ,

ಅಂಥ ಅಸಮ್ಮತತೆಗಾಗಿ ಅದರ ಕಾರಣಗಳನ್ನು ದಾಖಲಿಸಬೇಕು ಹಾಗೂ ವಿಷಯದಲ್ಲಿ ಏನಾದರೂ ಇದ್ದರೆ, ಅದನ್ನು ತನ್ನ ಮನವಿಯಲ್ಲಿ ತಿಳಿಸಲು ನೌಕರನಿಗೆ ಅಂಥ ಅಸಮ್ಮತತೆಯ ಕಾರಣಗಳನ್ನು ತಿಳಿಸುವುದು ಹಾಗೂ ದಂಡವನ್ನು ವಿಧಿಸುವ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು ಅದನ್ನು ಪರಿಗಣಿಸುವುದು. 11–ಎ ನಿಯಮದ (3) ಮತ್ತು (4)ನೇ ಉಪ – ನಿಯಮಗಳನ್ನು ಜೊತೆಯಲ್ಲಿ ಓದಿಕೊಳ್ಳಬೇಕಾಗುತ್ತದೆ ಹಾಗೆ ಓದುವಾಗ, ನಿರ್ಣಯಗಳ ವಿರುದ್ಧ ಮನವಿಯನ್ನು ಸಲ್ಲಿಸಲು ನೌಕರನಿಗೆ ಅವಕಾಶವನ್ನು ಒದಗಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತ್ರ ಅವುಗಳನ್ನು ರೂಪಿಸಬೇಕೆಂಬುದು ಸ್ಪಷ್ಟವಾಗುತ್ತದೆ, ಅವು, ಅವನಿಗೆ ವ್ಯತಿರಿಕ್ತವಾಗುವಷ್ಟರಮಟ್ಟಿಗೆ ಶಿಸ್ತು ಪ್ರಾಧಿಕಾರಕ್ಕೆ 'ತಾತ್ಕಾಲಿಕ' ವೆಂದು ಕರೆಯಬಹುದು. ವಿವರಣೆಯನ್ನು ಸಲ್ಲಿಸಿದರೆ, ವಿವರಣೆಯನ್ನು ಅರ್ಥಪೂರ್ಣಗೊಳಿಸುವುದು ಹಾಗೂ 11–ಎ (4)ನೇ ನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆದೇಶವನ್ನು ಹೊರಡಿಸುವುದು ಶಿಸ್ತು ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಪರಿಣಮಿಸುತ್ತದೆ.

7. ಎದುರುದಾರನು ರಾಜ್ಯದ ಒಂದು ಸಾಧನವಾಗಿದ್ದು, ಸ್ವಾಭಾವಿಕ ನ್ಯಾಯದ ತತ್ವಗಳನ್ನು ಅನುಸರಿಸುವ ಮೂಲಕ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವುದನ್ನು ನಿರೀಕ್ಷಿಸಲಾಗಿದ್ದು, ಆ ಅರ್ಥದ ಮೂಲಕ ಮೌಖಿಕ ವಿಚಾರಣೆಯನ್ನು ಅನುಮತಿಸದ ಪಕ್ಷದಲ್ಲಿ ಸಲ್ಲಿಸಲಾದ ವಿವರಣೆಯನ್ನು ಶಿಸ್ತು ಪ್ರಾಧಿಕಾರದ ಯುಕ್ತ ಪರಿಗಣನೆಯನ್ನು ಸ್ವೀಕರಿಸಬೇಕು.

8. ದಿನಾಂಕ: 27.01.2011ರ ಕಾರಣ ಕೇಳುವ ನೋಟೀಸಿಗೆ (ದಿನಾಂಕ: 23.11.2010ರಂದು ನಡೆದ ಮಂಡಳಿ ಸಭೆಯ ನಡಾವಳಿಗಳು) ಆರೋಪಗಳ ಮುಖ್ಯಾಂಶ; ವಿಚಾರಣಾ ಅಧಿಕಾರಿಯ ನಿರ್ಣಯಗಳು ಶೀರ್ಷಿಕೆಯಿರುವ ಕೋಷ್ಠಕದ ರೂಪದಲ್ಲಿ ಅನುಬಂಧ–1ನ್ನು ಲಗತ್ತಿಸಲಾಗಿದೆ; ಶ್ರೀ ಅಜಯ್‌ಕುಮಾರ್ ಪಾಟೀಲ್‌ರವರು ಸರಿಯಾಗಿ ವಾದಿಸಲಾದಂತೆ 'ಮಂಡಳಿಯ ಸಾಮಾನ್ಯ ಅಭಿಪ್ರಾಯೋಕ್ತಿಗಳು' ಶೀರ್ಷಿಕೆಯೊಂದಿಗೆ ಮಂಡಳಿಯ ಅಭಿಪ್ರಾಯಗಳನ್ನು ಹಾಗೂ ಉಪಾಂತ ಭಾಗವನ್ನು, ವಿಚಾರಣಾ ಅಧಿಕಾರಿಯ ನಿರ್ಣಯಗಳೊಂದಿಗೆ ಇರುವ

ಅದರ ಅಸಮ್ಮತತೆಯು ಕಾರಣಗಳನ್ನು ದಾಖಲಿಸಿರುವುದಿಲ್ಲ ಹಾಗೂ ದೋಷಾರೋಪವಾರು ತನ್ನ ಸ್ವಂತ ನಿರ್ಣಯಗಳನ್ನು ದಾಖಲಿಸಿರುವುದಿಲ್ಲ. ಕೋಷ್ಠಕ – ಅನುಬಂಧ–1 ಕಂಡಿಕೆವಾರು ಪ್ರತಿಕ್ರಿಯೆಗಳಾಗಿದೆಯೆಂಬುದು ಕಂಡುಬರುತ್ತದೆ ಹಾಗೂ ಅಂಥ ಅಸಮ್ಮತತೆಗೆ ಶಿಸ್ತುಪ್ರಾಧಿಕಾರದ ಕಾರಣಗಳನ್ನು ದಾಖಲಿಸಿರುವುದಿಲ್ಲ ಹಾಗೂ ಶಿಸ್ತು ಪ್ರಾಧಿಕಾರದ ಆರೋಪವಾರು ನಿರ್ಣಯಗಳನ್ನೂ ದಾಖಲಿಸಿರುವುದಿಲ್ಲ. ಹೀಗಾಗಿ ಅನುಬಂಧ–1 ದಿನಾಂಕ: 27.1.2011ರ ಕಾರಣ ಕೇಳುವ ನೋಟೀಸಿಗೆ ಅನುಸರಣೆಯ ಪ್ರಹಸನ ಮಾತ್ರವಾಗಿದೆ.

9. ವ್ಯವಸ್ಥಾಪಕ ನಿರ್ದೇಶಕರು ಅರ್ಜಿದಾರನಿಗೆ ನೀಡಿದ ದಿನಾಂಕ: 27.01.2011ರ ಕಾರಣ ಕೇಳುವ ನೋಟೀಸಿಗೆ ಅರ್ಜಿದಾರನು ದಿನಾಂಕ: 5.04.2011ರಂದು ಪ್ರತ್ಯುತ್ತರವನ್ನು ಸಲ್ಲಿಸಿರುವುದರಲ್ಲಿ ಯಾವುದೇ ವಿವಾದವಿಲ್ಲ. ದಿನಾಂಕ: 07.12.2011ರ ಆದೇಶವು, ಅರ್ಜಿದಾರನ ಸದರಿ ವಿವರಣೆಯನ್ನು ಗಮನಕ್ಕೆ ತೆಗೆದುಕೊಂಡು ಶಿಸ್ತುಪ್ರಾಧಿಕಾರವು ಈ ಮುಂದಿನ ನಿರ್ಣಯವನ್ನು ಕೈಗೊಂಡಿದೆಯೆಂಬುದನ್ನು ಸ್ಪಷ್ಟಪಡಿಸಿದೆ:

> " ................ ಮಂಡಳಿಯು ಸವಿವರವಾಗಿ ಪರಿಶೀಲಿಸಿದ ನಂತರ, ಸಿಎಸ್ಓ ಭದ್ರತಾ ದಸ್ತಾವೇಜುಗಳನ್ನು ಪಡೆದುಕೊಂಡಿರುವುದರಿಂದ ಸಿಎಸ್ಓ ನೀಡಿದ ಪ್ರತ್ಯುತ್ತರವನ್ನು ಒಪ್ಪಿಕೊಳ್ಳಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ಕಂಪೆನಿ ಹಾಗೂ ಪಾರ್ಶ್ವಿಕ ಭದ್ರತಾ ಮಾಲೀಕರು ಹಾಗೆ ದಸ್ತಾವೇಜುಗಳನ್ನು ನಿರ್ವಹಿಸಿರುವರೆಂಬುದನ್ನು ಟಿಪ್ಪಣಿ ಹಾಳೆಯಲ್ಲಿ ದಾಖಲಿಸಿರುವರು ಎಂಬುದರಲ್ಲಿ ಯಾವುದೇ ವಿವಾದವಿಲ್ಲ. ಅಷ್ಟೇ ಅಲ್ಲ, ಸಿಎಸ್ಓ ಮಾಡಿದ ಲೋಪಗಳು ಗಂಭೀರ ಸ್ವರೂಪದ್ದಾಗಿವೆ. ಸಿಎಸ್ಓನ ಉಪೇಕ್ಷೆಯ ಕಾರಣದಿಂದ ಅದರ ಬಾಕಿಗಳ ವಸೂಲಿ ಸಂಬಂಧ ಪಾರ್ಶ್ವಿಕ ಸ್ವತ್ತಿನ ಮಾರಾಟಕ್ಕೆ ನಿಗಮವು ಯಾವುದೇ ಕ್ರಮವನ್ನು ಕೈಗೊಳ್ಳಲಾಗುವುದಿಲ್ಲ. ಹಣಕಾಸು ಖಾತರಿ ಸಾಲ ಲೆಕ್ಕವು,

> ದಿನಾಂಕ: 30.06.2011ರಂದು ಇದ್ದಂತೆ 20.83ಕೋಟಿ ರೂ.ಗಳಾಗಿದ್ದು, ಈ ಪ್ರಕರಣದಲ್ಲಿ ಮತ್ತೆ ವಸೂಲಿ ಮಾಡುವ ಸಂದರ್ಭ ದೂರದ ಮಾತಾಗಿದೆ''.

ಅರ್ಜಿದಾರನ ಸದರಿ ವಿವರಣೆಯನ್ನು ಅರ್ಥಪೂರ್ಣ ಪರಿಗಣನೆಯಂತೆ ಸ್ವೀಕರಿಸಿಲ್ಲ ಹಾಗೂ ಯಾವುದೇ ಸಿಂಧುವಾದ ಕಾರಣವನ್ನು ನೀಡದೆ ತಳ್ಳಿಹಾಕಲಾಗಿದೆ. ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿಲ್ಲ ಅಥವಾ ನಿರ್ಣಯವನ್ನು ಬೆಂಬಲಿಸುವಲ್ಲಿ ಕಾರಣಗಳನ್ನೂ ದಾಖಲಿಸಿಲ್ಲ. ಹೀಗಾಗಿ ಶಿಸ್ತು ಪ್ರಾಧಿಕಾರವು 11–ಎ ನಿಯಮದ ಪರಿಭಾಷೆಯಲ್ಲಿ ಅದರ ಕರ್ತವ್ಯವನ್ನು ನಿರ್ವಹಿಸುವಲ್ಲಿ ದೋಷವೆಸಗಿದ್ದು, ಕಾನೂನುಬಾಹಿರವಾಗಿ ಅರ್ಜಿದಾರನ ಮೇಲೆ ಶಿಕ್ಷೆಯನ್ನು ವಿಧಿಸಿದೆ.

10. ಅರ್ಜಿದಾರನು ಸಲ್ಲಿಸಿದ ಪುನರ್ ಪರಿಶೀಲನಾ ಅರ್ಜಿಯನ್ನು, ವಿವರಿಸಲಾದ ಸಂಗತಿಗಳನ್ನು ಹಾಗೂ ಅದರಲ್ಲಿ ಎತ್ತಲಾದ ಆಧಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ವಜಾಗೊಳಿಸಲಾಗಿದ್ದು, ದಿನಾಂಕ: 9.3.2012ರ ಆದೇಶದಿಂದ ಇವು ಸ್ಪಷ್ಟವಾಗುತ್ತಿದ್ದು, ಅದರ ಸಂಬಂಧಪಟ್ಟ ಭಾಗವನ್ನು ಈ ಮುಂದಿನಂತೆ ಓದಲಾಗಿದೆ:

> ''ಮಂಡಳಿಯು ಡಿ.ಓ. ಸಲ್ಲಿಸಿದ ಪುನರ್ ಪರಿಶೀಲನಾ ಅರ್ಜಿಯನ್ನು ಅವಗಾಹಿಸಿ, ಡಿ.ಓ.ರವರು, ಸಾಲ ಕಡತ ಟಿಪ್ಪಣಿ ಹಾಳೆಯಲ್ಲಿ, ಖಾತರಿ ದಸ್ತಾವೇಜುಗಳನ್ನು ಜಾಮೀನಿನೊಂದಿಗೆ ಕಂಪೆನಿಯು ನಿರ್ವಹಿಸಿದೆ ಎಂಬುದನ್ನು ದಾಖಲಿಸಲಾಗಿದೆಯೆಂಬುದನ್ನು ಗಮನಿಸಲಾಗಿದೆ. ಕಾನೂನು ಅಧಿಕಾರಿಯಾಗಿ ಅವರು ನಿಗಮದ ಹಿತಾಸಕ್ತಿಯನ್ನು ರಕ್ಷಿಸಲು ಪಾರ್ಶ್ವಿಕ ಭದ್ರತಾ ಶೀರ್ಷಿಕೆ ಪತ್ರಗಳ ಅಧಿಕೃತತೆಯನ್ನು ಪರಿಶೀಲಿಸಲು ಯುಕ್ತ ಕಾಳಜಿಯನ್ನು ಹಾಗೂ ಎಚ್ಚರಿಕೆಯನ್ನು ವಹಿಸಬೇಕಿತ್ತು. ಡಿ.ಓ ಈ ಪ್ರಕರಣದಲ್ಲಿ ಸಾಲದ ಸಾಕ್ಷ್ಯ ಸಂಕಲನದ ಹಂತದಲ್ಲಿ ಯುಕ್ತ ಎಚ್ಚರಿಕೆಯನ್ನು ವಹಿಸುವಲ್ಲಿ ತನ್ನ ಕರ್ತವ್ಯಗಳಲ್ಲಿ ವಿಫಲನಾಗಿರುವನು ಎಂಬುದನ್ನು, ಆದುದರಿಂದ

ನಿಗಮವು, ಸಾಲ ಲೆಕ್ಕದಲ್ಲಿ ಅಪಾರವಾದ ಬಾಕಿಯನ್ನು ವಸೂಲಿ ಮಾಡಲು ಪಾರ್ಶ್ವಿಕ ಭದ್ರತಾ ಸ್ವತ್ತಿನ ಪ್ರತಿಯಾಗಿ ಕ್ರಮ ಮುಂದುವರಿಸಲು ವಿಫಲವಾಗಿದೆಯೆಂಬುದನ್ನು ಗಮನಿಸಿದೆ. ಮೊದಲಿದ್ದ ಮನವಿಯಲ್ಲಿ ಅವನು ತೆಗೆದುಕೊಂಡಿದ್ದ ವಾದವೇ ಪುನರಾವರ್ತನೆಯಾಗಿದೆ ಯೆಂಬುದನ್ನು ಹೊರತುಪಡಿಸಿದರೆ ಪುನರ್ ಪರಿಶೀಲನಾ ಅರ್ಜಿಯಲ್ಲಿ ಯಾವುದೇ ಹೊಸ ಆಧಾರಗಳನ್ನು ತಂದಿರುವುದಿಲ್ಲ ಹಾಗೂ ದಿನಾಂಕ: 8.9.2011ರಂದು ನಡೆದ ಅದರ ಸಭೆಯಲ್ಲಿ ಮಂಡಳಿಯು ಹೊರಡಿಸಿದ ಆದೇಶವನ್ನು ಮರು ಪರಿಶೀಲಿಸಲು ಯಾವುದೇ ಗುಣಾರ್ಹತೆ ಇರಲಿಲ್ಲ.

ಮೇಲಿನ ಅಭಿಪ್ರಾಯೋಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಂಡಳಿಯು, ವ್ಯವಸ್ಥಾಪಕರ ದರ್ಜೆಯಲ್ಲಿನ ಕಾಲಿಕ ವೇತನ ಶ್ರೇಣಿಗೆ ಇಳಿಸುವ ದಂಡವನ್ನು ವಿಧಿಸುವ ಅದರ ಮೊದಲಿನ ನಿರ್ಣಯವನ್ನು ಪುನರುಚ್ಚರಿಸಿದ್ದು, ಡಿ.ಓ.ರವರ ಪುನರ್‌ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಿದೆ.

ಮಂಡಳಿಯು, ಅಪೀಲುದಾರನಿಗೆ ಮಂಡಳಿಯ ಸದರಿ ನಿರ್ಣಯವನ್ನು ತಿಳಿಸಲು ವ್ಯವಸ್ಥಾಪಕ ನಿರ್ದೇಶಕರನ್ನು ಅಧಿಕೃತಗೊಳಿಸಿತ್ತು.

**ಆಜ್ಞೆ**

ಮಂಡಳಿಯು ಶ್ರೀ ಜಿ.ಬಿ. ಲೋಕೇಶ್‌ರವರು ಸಲ್ಲಿಸಿದ ದಿನಾಂಕ: 25.01.2012ರ ಪುನರ್ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿ, ವ್ಯವಸ್ಥಾಪಕರ ದರ್ಜೆಯಲ್ಲಿನ ಕಡಿಮೆ ಕಾಲಿಕ ವೇತನ ಶ್ರೇಣಿಗೆ ಇಳಿಸುವ ದಂಡವನ್ನು ವಿಧಿಸುವುದನ್ನು ದೃಢೀಕರಿಸಿದೆ".

ಹೀಗಾಗಿ, ಮೇಲೆ ಗಮನಿಸಲಾಗಿದ್ದಂತೆ, ದಿನಾಂಕ: 9.3.2012ರ ಆದೇಶವನ್ನು ಹೊರಡಿಸುವಾಗಲೂ ಕೂಡ ಅದೇ ತಪ್ಪನ್ನು ಮಾಡಿರುವುದು ಸ್ಪಷ್ಟವಾಗುತ್ತದೆ.

11. ವಿಚಾರಣಾ ಪ್ರಾಧಿಕಾರವು ದಾಖಲಿಸಿದ ನಿರ್ಣಯಗಳೊಂದಿಗಿನ ಅಸಮ್ಮತತೆಗೆ ಯಾವುದೇ ಕಾರಣಗಳನ್ನು ದಾಖಲಿಸದೆ, ಕಾರಣಗಳನ್ನು ನೀಡಿ ವಿಚಾರಣಾ ಪ್ರಾಧಿಕಾರವು ಅರ್ಜಿದಾರನನ್ನು ಆರೋಪ ಮುಕ್ತಗೊಳಿಸಿದ್ದರೂ, ಅರ್ಜಿದಾರನ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಶಿಸ್ತುಪ್ರಾಧಿಕಾರದ ಕಾರಣಗಳನ್ನು ಹಿಂದೆ ಹೇಳಲಾದ ಆದೇಶಗಳನ್ನು ಹೊರಡಿಸಲಾಗಿದೆ ಹಾಗೂ ಅರ್ಜಿದಾರನಿಗೆ ದಂಡವನ್ನು ವಿಧಿಸಿರುವುದು ತನ್ನ ಮನಬಂದಂತೆ ಮಾಡಿದ ಕೃತ್ಯವಾಗಿದೆ. ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಎದುರುದಾರನ ಕ್ರಮವು, 11–ಎ ನಿಯಮದ (9)ನೇ ಉಪ–ನಿಯಮವನ್ನು ಉಲ್ಲಂಘಿಸಿದ್ದು, ಪ್ರಶ್ನಿತ ಆದೇಶಗಳು ಕಾನೂನುಬಾಹಿರವಾಗಿವೆ.

12. ***ಪಂಜಾಬ್ ನ್ಯಾಷನಲ್ ಬ್ಯಾಂಕ್ – ವಿರುದ್ಧ – ಕುಂಜ್ ಬಿಹಾರಿ ಮಿಶ್ರಾ***[1] ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು, ಪಂಜಾಬ್ ನ್ಯಾಷನಲ್ ಬ್ಯಾಂಕ್ ಆಫೀಸರ್ ನೌಕರರ (ಶಿಸ್ತು ಮತ್ತು ಅಪೀಲು) ವಿನಿಯಮಗಳು, 1977ರ ವಿನಿಯಮ 7(2) ಇವು ವಿಚಾರಣಾ ಅಧಿಕಾರಿಯ ನಿರ್ಣಯಗಳಲ್ಲಿ ಭಿನ್ನಾಭಿಪ್ರಾಯ ಹೊಂದುವ ಮೊದಲು ಶಿಸ್ತು ಪ್ರಾಧಿಕಾರವು ಯಾವುದೇ ನೋಟೀಸನ್ನು ನೀಡುವ ಬಗ್ಗೆ ಉಪಬಂಧಿಸಿಲ್ಲ ಇದನ್ನು ಪರಿಗಣಿಸುವ ಮೂಲಕ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಹಿಂದೆ ಹೇಳಲಾದ ಚರ್ಚೆಗಳ ಪರಿಣಾಮವನ್ನು ಸ್ವಾಭಾವಿಕ ನ್ಯಾಯದ ತತ್ವಗಳನ್ನು ವಿನಿಯಮ 7(2)ರಲ್ಲಿ ಓದಿಕೊಳ್ಳಬೇಕಾಗುತ್ತದೆ ಎಂಬುದಾಗಿದೆ. ಅದರ ಕಾರಣದಿಂದ, ಯಾವುದೇ ಆರೋಪದ ವಿಷಯ ಕುರಿತ ವಿಚಾರಣಾ ಪ್ರಾಧಿಕಾರದೊಂದಿಗೆ ಶಿಸ್ತು ಪ್ರಾಧಿಕಾರವು

1. (1998) 7 ಎಸ್‌ಸಿಸಿ 84

> ಅಸಮ್ಮತಿಯನ್ನು ಹೊಂದಿದಾಗಲೆಲ್ಲಾ ಅಂಥ ಆರೋಪದ ಬಗ್ಗೆ ತನ್ನ ಸ್ವಂತ ನಿರ್ಣಯಗಳನ್ನು ದಾಖಲಿಸುವ ಮೊದಲು, ಅಂಥ ಅಸಮ್ಮತತೆಯ ತನ್ನ ತಾತ್ಕಾಲಿಕ ಕಾರಣಗಳನ್ನು ದಾಖಲಿಸಲೇಬೇಕು ಹಾಗೂ ಅದರ ನಿರ್ಣಯಗಳನ್ನು ಅದು ದಾಖಲಿಸುವ ಮೊದಲು ಕರ್ತವ್ಯಭ್ರಷ್ಟ ಅಧಿಕಾರಿಗೆ ಅವಕಾಶವನ್ನು ನೀಡಬೇಕು. ಅದರ ನಿರ್ಣಯಗಳನ್ನು ಒಳಗೊಂಡಿರುವ ವಿಚಾರಣಾ ಅಧಿಕಾರಿಯ ವರದಿಯನ್ನು ತಲುಪಿಸಬೇಕು ಹಾಗೂ ಕರ್ತವ್ಯಭ್ರಷ್ಟ ಅಧಿಕಾರಿಗೆ ವಿಚಾರಣಾ ಅಧಿಕಾರಿಯ ಆಶಾದಾಯಕ ನಿರ್ಣಯವನ್ನು ಅಂಗೀಕರಿಸಲು ಶಿಸ್ತುಪ್ರಾಧಿಕಾರವನ್ನು ಮನವೊಲಿಸುವ ಅವಕಾಶವನ್ನು ನೀಡಬೇಕು. ನಾವು ಈಗಾಗಲೇ ಅಭಿಪ್ರಾಯಪಡಲಾದಂತೆ ಸ್ವಾಭಾವಿಕ ನ್ಯಾಯ ತತ್ವಗಳನ್ನು ಪ್ರಾಧಿಕಾರವು ಅಗತ್ಯಪಡಿಸುತ್ತಿದ್ದು, ಅದು ಅಂತಿಮನಿರ್ಣಯವನ್ನು ತೆಗೆದುಕೊಳ್ಳಬೇಕು ಹಾಗೂ ದಂಡವನ್ನು ವಿಧಿಸಬಹುದು. ಅಧಿಕಾರಿಯ ವಿರುದ್ಧ ರೂಪಿಸಲಾದ ಆರೋಪಗಳ ಅದರ ನಿರ್ಣಯಗಳನ್ನು ದಾಖಲಿಸಿ ಶಿಸ್ತು ಪ್ರಾಧಿಕಾರದ ಮುಂದೆ ಮನವಿಯನ್ನು ಸಲ್ಲಿಸುವ ದುರ್ನಡತೆಯನ್ನು ಆರೋಪಿಸಲಾದ ಅಧಿಕಾರಿಗೆ ಅವಕಾಶವನ್ನು ನೀಡುವುದು".
>
> (ಒತ್ತು ನೀಡಲಾಗಿದೆ)

13. ***ಯೋಗಿನಾಥ್ ಡಿ. ಬ್ಯಾಗ್ಡೇ –ವಿರುದ್ಧ–ಮಹಾರಾಷ್ಟ್ರ ರಾಜ್ಯ***[2] ಪ್ರಕರಣದಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು, ಮಹಾರಾಷ್ಟ್ರ ಸಿವಿಲ್ ಸೇವಾ (ಶಿಸ್ತು ಮತ್ತು ಅಪೀಲು) ನಿಯಮಗಳು 1979ರ 9(2)ನೇ ನಿಯಮದ ವ್ಯಾಪ್ತಿಯನ್ನು ಗಮನಿಸಿದ್ದು, ಇದನ್ನು ನಿರ್ಣಯದಲ್ಲಿನ ಭಿನ್ನಾಭಿಪ್ರಾಯದ ಕಾರಣದಿಂದ ಅರ್ಜಿದಾರನಿಗೆ ಅವಕಾಶವನ್ನು ನೀಡಲು ಶಿಸ್ತುಪ್ರಾಧಿಕಾರಕ್ಕೆ ನಿರ್ದಿಷ್ಟವಾಗಿ ಉಪಬಂಧಿಸಿಲ್ಲವೆಂದು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

2. (1999) 7 ಎಸ್‌ಸಿಸಿ 739

"ಆ ಹಂತದಲ್ಲೂ ಸ್ವಾಭಾವಿಕ ನ್ಯಾಯದ ತತ್ವಗಳೊಂದಿಗೆ ಹೊಂದಿಕೆಯಾಗುವಲ್ಲಿ, "ಸುನಾವಣೆ"ಯ ಅಗತ್ಯತೆಯನ್ನು 9(2)ನೇ ನಿಯಮದಲ್ಲಿ ಓದಿಕೊಳ್ಳಬೇಕಾಗುತ್ತದೆ ಹಾಗೂ ವಿಚಾರಣಾ ಪ್ರಾಧಿಕಾರಿಯ ನಿರ್ಣಯಗಳಲ್ಲಿ ಶಿಸ್ತು ಪ್ರಾಧಿಕಾರವು ಅಸಮ್ಮತಿ ಹೊಂದಿದ ಕಾರಣದಿಂದ, ಇದು, ಕರ್ತವ್ಯಭ್ರಷ್ಟ ಅಧಿಕಾರಿಗೆ ಸುನಾವಣೆಯ ಅವಕಾಶವನ್ನು ನೀಡುವುದು, ಹಾಗೆಯೇ ವಿಚಾರಣಾ ಪ್ರಾಧಿಕಾರವು ದಾಖಲಿಸಿದ ನಿರ್ಣಯಗಳು ದೋಷದಿಂದ ಕೂಡಿಲ್ಲವೆಂಬುದನ್ನು ಸೂಚಿಸಲು ಅವನು ಅವಕಾಶವನ್ನು ಹೊಂದಬಹುದು ಹಾಗೂ ಅದನ್ನು ವಿಭಿನ್ನ ದೃಷ್ಟಿಯಲ್ಲಿ ತೆಗೆದುಕೊಳ್ಳುವ ಅವಕಾಶವಿರಲಿಲ್ಲ. ಶಿಸ್ತು ಪ್ರಾಧಿಕಾರವು, ಅದೇ ಸಮಯದಲ್ಲಿ, ವಿಚಾರಣಾ ಪ್ರಾಧಿಕಾರಿಯ ನಿರ್ಣಯಗಳಲ್ಲಿನ ಅಸಮ್ಮತಿಗೆ 'ತಾತ್ಕಾಲಿಕ' ಕಾರಣಗಳನ್ನು ಕರ್ತವ್ಯಭ್ರಷ್ಟ ಅಧಿಕಾರಿಗೆ ತಿಳಿಸಬೇಕು ಹಾಗೆಯೇ ಕರ್ತವ್ಯಭ್ರಷ್ಟ ಅಧಿಕಾರಿಯು, ವಿಚಾರಣಾ ಪ್ರಾಧಿಕಾರವು ದಾಖಲಿಸಿದ ನಿರ್ಣಯಗಳೊಂದಿಗೆ ಅಸಮ್ಮತಿ ಇರುವುದಕ್ಕೆ ಶಿಸ್ತು ಪ್ರಾಧಿಕಾರವು ಪ್ರಸ್ತಾವಿಸಿದ ಆಧಾರದ ಕಾರಣಗಳು ಸುಸಂಬದ್ಧವಾಗಿಲ್ಲವೆಂಬುದನ್ನು ಮತ್ತೂ ಸೂಚಿಸಬಹುದು. ವಿಚಾರಣಾ ಪ್ರಾಧಿಕಾರವು ಈಗಾಗಲೇ ದಾಖಲಿಸಿದ 'ತಪ್ಪಿತಸ್ಥನಲ್ಲ'ವೆಂಬ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡಲು ಹಕ್ಕುಳ್ಳದ್ದಾಗಿರುವುದಿಲ್ಲ".

(ಒತ್ತು ನೀಡಲಾಗಿದೆ)

14. ***ರಂಜಿತ್ ಸಿಂಗ್ –ವಿರುದ್ಧ– ಭಾರತ ಒಕ್ಕೂಟ***[3] ಪ್ರಕರಣದಲ್ಲಿ, ಇಲಾಖಾ ವ್ಯವಹರಣೆಗಳಲ್ಲಿ ವಿಚಾರಣಾ ಅಧಿಕಾರಿಯು, ಅಪೀಲುದಾರನನ್ನು ಆರೋಪಗಳಿಂದ

3. (2006) 4 ಎಸ್‌ಸಿಸಿ 153

ದೋಷವಿಮುಕ್ತವಾಗಿ ಮಾಡುವ ವರದಿಯನ್ನು ಸಲ್ಲಿಸಿದ್ದಾನೆ. ಶಿಸ್ತು ಪ್ರಾಧಿಕಾರವು ವಿಚಾರಣಾ ಅಧಿಕಾರಿಯ ನಿರ್ಣಯಗಳಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದು, ವಿಚಾರಣಾ ಅಧಿಕಾರಿಯ ವರದಿಯ ಬಗ್ಗೆ ಅಸಮ್ಮತಿ ಹೊಂದಿರುವುದಕ್ಕೆ ಕಾರಣಗಳನ್ನು ತೋರಿಸುವ ವಿವರಣ ಪತ್ರವನ್ನು ನೀಡಿದ್ದು, ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲು ಅಸಮ್ಮತತೆಯ ಆಧಾರಕ್ಕೆ ಪ್ರತಿವಾದದ ಮನವಿಯನ್ನು ಮಾಡಲು ಅಪೀಲುದಾರನನ್ನು ಕರೆಸಲಾಯಿತು. ಅಪೀಲುದಾರನು 10 ದಿನಗಳನ್ನು ಕೋರಿದ್ದು, ಅದಕ್ಕೆ ಅವಕಾಶ ನೀಡಲಾಗಿತ್ತು. ಮತ್ತೆ ಅವನು ಹೆಚ್ಚಿನ ಸಮಯಕ್ಕಾಗಿ ಕೋರಿಕೊಂಡಿದ್ದು ಅದಕ್ಕೂ ಅವಕಾಶವನ್ನು ನೀಡಲಾಗಿತ್ತು. ವಿಸ್ತೃತ ಸಮಯವನ್ನು ಕೋರಿ ಮತ್ತೊಂದು ಅರ್ಜಿಯನ್ನು ಸಲ್ಲಿಸಿದ್ದು, ಅದು ಮಂಜೂರಾಗಲಿಲ್ಲ. ಏಕೆಂದರೆ, ಶಿಸ್ತು ಪ್ರಾಧಿಕಾರವು ಹಿಂದೆ ಹೇಳಲಾದ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆಯೆಂಬುದರ ಹಿನ್ನೆಲೆಯಲ್ಲಿ ವಿಷಯವನ್ನು ಪರಿಗಣಿಸಿ ಈಗಾಗಲೇ ಆದೇಶವನ್ನು ಸಿದ್ಧಪಡಿಸಿಕೊಂಡಿತ್ತು.

> "22. ಈ ನ್ಯಾಯಾಲಯದ ಹಿಂದೆ ಸೂಚಿಸಲಾದ ನಿರ್ಣಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಸ್ವಾಭಾವಿಕ ನ್ಯಾಯದ ತತ್ವಗಳು ಶಿಸ್ತು ಪ್ರಾಧಿಕಾರದೊಂದಿಗೆ ಅನುಸಾರವಾಗಿರಬೇಕಾಗುತ್ತದೆ ಎಂಬುದು ಈಗ ಸುಸ್ಥಾಪಿತವಾದುದಾಗಿದೆ. ಅವನೂ ಕೂಡ ದಾಖಲೆಯಲ್ಲಿರುವ ಮಾಹಿತಿಗಳಿಗೆ ವಿವೇಚನೆಯನ್ನು ಅನ್ವಯಿಸಬೇಕಾಗುತ್ತದೆ. ವಿಚಾರಣಾ ಅಧಿಕಾರಿಯು, ಅಪೀಲುದಾರನ ಪರವಾಗಿರುವ ನಿರ್ಣಯಕ್ಕೆ ಬಂದಿದ್ದಾರೆ. ಅಂಥ ನಿರ್ಣಯಗಳನ್ನು ಶಿಸ್ತು ಪ್ರಾಧಿಕಾರವು ತಿರಸ್ಕರಿಸಿದೆ. (ಈ ಪ್ರಕಾರ ಕೋರಿದೆ). <u>ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಶಿಸ್ತು ಪ್ರಾಧಿಕಾರವು ಚಲಾಯಿಸಲು ಕೋರಲಾದ ಅಧಿಕಾರ ಅಪೀಲು ಪ್ರಾಧಿಕಾರದಂತೆ ಕೋರದಿದ್ದರೂ, ಕೂಡ ಅದಕ್ಕೆ ಸದೃಶವಾಗಿವೆ. ವಿಚಾರಣಾ ವರದಿಯು ಅಪೀಲುದಾರನ ಪರವಾಗಿದೆ ಆದರೆ ಶಿಸ್ತು ಪ್ರಾಧಿಕಾರವು ಆ</u>

ತೀರ್ಮಾನಕ್ಕೆ ಭಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ, ಸ್ವಾಭಾವಿಕ ನ್ಯಾಯದ ತತ್ವಗಳಿಗೆ ಅನುಸಾರವಾಗಿರುವುದನ್ನು ಹೊರತುಪಡಿಸಿ, ಹೊಸದಾಗಿ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ವಿಶ್ಲೇಷಿಸಲು ಅಪೀಲುದಾರನು ಸಲ್ಲಿಸಿದ ಯಾವುದೇ ಕಾರಣ ಕೇಳುವ ನೋಟೀಸನ್ನು ನೀಡದಿದ್ದಾಗ ಅದು ಅವನ ಕಡೆಯ ಹೊಣೆಗಾರಿಕೆಯಾಗುತ್ತದೆ . . . .”

(ಒತ್ತು ನೀಡಲಾಗಿದೆ)

15. ***ಮಥುರಾ ಪ್ರಸಾದ್ -ವಿರುದ್ಧ- ಭಾರತ ಒಕ್ಕೂಟ***[4], ಪ್ರಕರಣದಲ್ಲಿ ದುರ್ನಡತೆಯ ಆಪಾದಿತ ಕೃತ್ಯದ ಕಾರಣದಿಂದ ನೌಕರನ ಜೀವನೋಪಾಯ ಮಾರ್ಗವನ್ನು ಕಿತ್ತುಕೊಂಡಂತಾಗಿದ್ದರೆ, *ಉಪ ನಿಯಮದ ಮೇರೆಗೆ ವಿಧಿಸಲಾದ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ* ಎಂದು ಅಭಿಪ್ರಾಯಪಡಲಾಗಿದ್ದು, ಅಷ್ಟೇ ಅಲ್ಲದೆ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> “19. ...................... ಕಾನೂನಿನಲ್ಲಿ ಏನಾದರೂ ದೋಷವಿದ್ದರೂ ಕೂಡ ದಾಖಲೆಯ ಮೇಲೆ ಸ್ಪಷ್ಟವಾಗಿದ್ದಲ್ಲಿ, ನ್ಯಾಯಿಕ ಪುನರ್ ಪರಿಶೀಲನೆಗೂ ಆಸ್ಪದವಿರುತ್ತದೆ ಎಂಬುದು ಈಗ ಸುಸ್ಥಾಪಿತವಾಗಿದೆ. ಶಾಸನಬದ್ಧ ಪ್ರಾಧಿಕಾರವು ಪರಿನಿಯಮದಲ್ಲಿ ಉಪಬಂಧಿಸದ ರೀತಿಯಲ್ಲಿ ತನ್ನ ಅಧಿಕಾರವನ್ನು ಬಳಸಿದರೆ ಅಥವಾ ವಿವೇಚನೆಯನ್ನು ಬಳಸದೆ ಆದೇಶವನ್ನು ಹೊರಡಿಸಿದರೆ ನ್ಯಾಯಿಕ ಪುನರ್ ಪರಿಶೀಲನೆಯು ಸಮರ್ಥನೀಯವಾಗಿರುತ್ತದೆ. ಸಾಕಷ್ಟು ಕಾರಣಗಳಿಗಾಗಿ ಸಂಗತಿಯ ದೋಷವಿದ್ದರೂ ಕೂಡ ನ್ಯಾಯಿಕ ಪುನರ್ ಪರಿಶೀಲನೆಯ ತತ್ವಗಳನ್ನು ಅನ್ವಯಿಸಬಹುದು”.

4. (2007) 1 ಎಸ್‌ಸಿಸಿ 437

16. ಪ್ರಸ್ತುತ ಪ್ರಕರಣದಲ್ಲಿ, ಶಿಸ್ತು ಪ್ರಾಧಿಕಾರವು, ವಿಚಾರಣಾ ಪ್ರಾಧಿಕಾರದ ನಿರ್ಣಯಗಳಲ್ಲಿ ಅಸಮ್ಮತತೆಯಿರುವ "ತಾತ್ಕಾಲಿಕ ಕಾರಣಗಳನ್ನು" ಅರ್ಜಿದಾರನಿಗೆ ತಿಳಿಸಿರುವುದೂ ಇಲ್ಲ ಅಥವಾ ಅರ್ಜಿದಾರನ ವಿರುದ್ಧ ವಿಧಿಸಲಾದ ವೆಚ್ಚಗಳ ಮೇಲೆ ತನ್ನ ಸ್ವಂತ ನಿರ್ಣಯಗಳನ್ನು ದಾಖಲಿಸಿಯೂ ಇಲ್ಲ. ಎಂದರೆ ದಿನಾಂಕ: 27.1.2011ರ ಮಾಹಿತಿಯನ್ನು ಅರ್ಜಿದಾರನಿಗೆ ಯಾವಾಗ ತಿಳಿಸಲಾಗಿತ್ತು. ಹೀಗಾಗಿ, 11–3 ನಿಯಮದ (3) ಮತ್ತು (4)ನೇ ಉಪ–ನಿಯಮಗಳ ಉಲ್ಲಂಘನೆಯಾಗಿದ್ದು, ಇದು ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಗೆ ಕಾರಣವಾಗಿದೆ, ಇದರ ಪರಿಣಾಮವಾಗಿ ಎಲ್ಲಾ ಮೂರು ಹಂತಗಳಲ್ಲಿ, ಎಂದರೆ 11–ಎ(3)ನಿಯಮಗಳು. 11–ಎ(4) ಹಾಗೂ 26ರಲ್ಲಿ ಶಿಸ್ತುಪ್ರಾಧಿಕಾರದ ನಿರ್ಣಯಿಸುವ ಪ್ರಕ್ರಿಯೆಯಲ್ಲಿ ದೋಷವಿರುತ್ತದೆ.

ಇದರ ಪರಿಣಾಮವಾಗಿ ಅರ್ಜಿಯನ್ನು ಸ್ವೀಕರಿಸಲಾಗಿದೆ ಹಾಗೂ ಪ್ರಶ್ನಿತ ಆದೇಶಗಳು ಅನುಬಂಧಗಳಾದ ಎ ಮತ್ತು ಬಿ ಗಳನ್ನು ವಜಾಗೊಳಿಸಲಾಗಿದೆ. ಇದು ಅಗತ್ಯವೆಂದು ಕಂಡುಬಂದರೆ, ಎಂದರೆ ಮೇಲಿನ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಚಾರಣಾ ವರದಿಯನ್ನು ಸ್ವೀಕರಿಸಲಾದ ಹಂತದಿಂದ ಅರ್ಜಿದಾರನ ವಿರುದ್ಧ ಹೊಸದಾಗಿ ವಿಚಾರಣೆ ಮುಂದುವರಿಸಲು ಎದುರುದಾರನಿಗೆ ಸ್ವಾತಂತ್ರ್ಯವನ್ನು ಕಾಯ್ದಿರಿಸಲಾಗಿದೆ.

ಯಾವುದೇ ವೆಚ್ಚಗಳಿರುವುದಿಲ್ಲ.